## ಕರ್ನಾಟಕ ಸರ್ಕಾರ

## ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ. ನೃಪತುಂಗ ರಸ್ತೆ, ಬೆಂಗಳೂರು

**ಸಂಖ್ಯೆ:**ಸಿ4(6)ಸಾ.ಸ್ಥ.ಧೂ.ನಿ/36/2008-09 **ದಿನಾಂಕ:**26.03.2012

## ಸುತ್ತೋಲೆ

**ವಿಷಯ:**-ರಿಟ್ ಅರ್ಜಿ ಸಂಖ್ಯೆ: 17958/09 (ಜಿ.ಎಮ್.ಆರ್.ಇ.ಎನ್) ದಿನಾಂಕ: 04.11.2009 ರ ತೀರ್ಪಿನಂತೆ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಬಗ್ಗೆ.

**ಉಲ್ಲೇಖ:**-1)ಈ ಕಛೇರಿಯ ಸುತ್ತೋಲೆ ಸಮ ಸಂಖ್ಯೆ ದಿನಾಂಕ:15.11.2010

2)ಸರ್ಕಾರದ ಪತ್ರದ ಸಂಖ್ಯೆ:ಇಡಿ.143.ಎಂ.ಸಿ.ಡಿ.2009, ದಿ:15.02.2011

3)ಈ ಕಛೇರಿಯ ಸುತ್ತೋಲೆ ಸಮಸಂಖ್ಯೆ ದಿನಾಂಕ:15.02.2011 ಮತ್ತು 21.12.2011

4)ಜಂಟಿ ನಿರ್ದೇಶಕರು(ವೈ)&ಸದಸ್ಯ ಕಾರ್ಯದರ್ಶಿಗಳು,ಕರ್ನಾಟಕ ರಾಜ್ಯ ತಂಬಾಕು ನಿಯಂತ್ರಣ ಘಟಕ, ಬೆಂಗಳೂರು ಇವರ ಪತ್ರ ಸಂಖ್ಯೆ:ಡಿಹೆಚ್ ಎಸ್/ತಂಬಾಕು/ 27/2011-12, ದಿನಾಂಕ:23/09/2011 & 03/11/2011.

5) ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸನಿ.ಶಾಶಿ.ತಂ.ಮು.ಶಾ-01/2011-12.ದಿ:17.12.2012

6) ಸರ್ಕಾರದ ಪತ್ರದ ಸಂಖ್ಯೆ:ಇಡಿ.143.ಎಂ.ಸಿ.ಡಿ.2009, ದಿ:07.03.2012

0-0-0-0-0-0

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಘನ ಉಚ್ಚ ನ್ಯಾಯಾಲಯದ ದಿನಾಂಕ:04/12/2009 ಮತ್ತು 06/04/2010ರ ತೀರ್ಪಿನಂತೆ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಸಂಬಂಧ ***"ಶಾಲಾ/ಕಾಲೇಜುಗಳ ಆವರಣದಿಂದ 100 ಗಜಗಳ ಅಂತರದಲ್ಲಿ ತಂಬಾಕುಯುಕ್ತ ವಸ್ತುಗಳ ಮಾರಾಟ ನಿಷೇಧಿಸಿದೆ"*** ಎಂದು ಶಾಲಾ/ಕಾಲೇಜುಗಳ ಆವರಣಗಳಲ್ಲಿ ಫಲಕಗಳನ್ನು ಪ್ರದರ್ಶಿಸಿ ಈ ಕಛೇರಿಗೆ ಹಾಗೂ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಉಲ್ಲೇಖಿತ-1,3 ಮತ್ತು 5 ಸುತ್ತೋಲೆಗಳಲ್ಲಿ ಸೂಚಿಸಲಾಗಿರುತ್ತದೆ. ಮತ್ತು ಉಚ್ಚ ನ್ಯಾಯಾಲಯದ ತೀರ್ಪಿನಂತೆ ದಿನಾಂಕ:17/02/2011 ರೊಳಗೆ ಕ್ರಮ ವಹಿಸುವಂತೆ ಮತ್ತು ಉಲ್ಲೇಖ-2ರ ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತೆ ತುರ್ತು ಕ್ರಮ ವಹಿಸಿ ಈ ಕಛೇರಿಗೆ ಮತ್ತು ಸರ್ಕಾರಕ್ಕೆ ವರದಿ ಮಾಡುವಂತೆ ಸೂಚಿಸಲಾಗಿತ್ತು. ಆದರೆ ನಿಮ್ಮಿಂದ ಇದುವರೆವಿಗೂ ವರದಿ ಸಲ್ಲಿಕೆಯಾಗಿರುವುದಿಲ್ಲ.

ಮುಂದುವರೆದು ಉಲ್ಲೇಖ-4ರ ಪತ್ರದನ್ವಯ Prohibition on sale of Cigrattes and Other Tobacco Products to minors Rules 2011ನ್ನು ಭಾರತ ಸರ್ಕಾರವು ತಿದ್ದುಪಡಿ ಮಾಡಿ ಜಾರಿಗೆ ತಂದಿದ್ದು, ಅದರಲ್ಲಿನ ನಿಯಮಗಳನ್ನು ಕರ್ನಾಟಕ ರಾಜ್ಯದಲ್ಲಿ ಅನುಸರಣೆ ಮಾಡುವಂತೆ ಮತ್ತು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಈ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸೂಚಿಸಿದ್ದು ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಸೂಚನೆಯ ಪ್ರತಿಯನ್ನು ಲಗತ್ತಿಸಿ ನಿಮಗೆ ಕಳುಹಿಸಿ ಆದೇಶದಲ್ಲಿನ ವಿಷಯ ಮತ್ತು ಅನುಬಂಧದಲ್ಲಿರುವ ಸೂಚನೆಗಳಂತೆ ಕ್ರಮವಹಿಸುವಂತೆ ಸೂಚಿಸಲಾಗಿರುತ್ತದೆ.

ಉಲ್ಲೇಖ-5 ರ ಈ ಕಛೇರಿಯ ಸುತ್ತೋಲೆಯಲ್ಲಿ ತಂಬಾಕು ಮುಕ್ತ ಶಾಲೆಗೆ ಮಾರ್ಗದರ್ಶಿ ಸೂತ್ರಗಳನ್ನು ತಿಳಿಸಿ ಅದರಂತೆ ಕ್ರಮವಹಿಸಲು ಸೂಚಿಸಲಾಗಿದೆ. ಮುಂದುವರೆದು ಪ್ರತಿಯೊಂದು ಶಾಲೆಯಲ್ಲಿನ ಮುಖ್ಯಶಿಕ್ಷಕರು ಆ ಶಾಲೆಯ ನೋಡಲ್ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿ ಈ ಕ್ರಮದ ಬಗ್ಗೆ ಶಾಲೆಯ ಮಕ್ಕಳಲ್ಲಿ ಅಗತ್ಯ ಜಾಗೃತಿ ಮೂಡಿಸಿರುವ ಕುರಿತು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಯವರು ಮಾಹಿತಿ ಸಂಗ್ರಹಿಸಿ ಕ್ರೋಡೀಕೃತ ಮಾಹಿತಿಯನ್ನು ಆಯಾ ಉಪನಿರ್ದೇಶಕರ ಮೂಲಕ ಈ ಕಛೇರಿಗೆ ಕಳುಹಿಸುವುದು. ಧಾರವಾಡ ಮತ್ತು ಗುಲ್ಬರ್ಗಾ ಆಯುಕ್ತಾಲಯಗಳ ವ್ಯಾಪ್ತಿಯಲ್ಲಿನ ಕ್ಷೇತ್ರ ಶಿಕ್ಷಣಾಧಿಕಾರಿಯವರು ಮಾಹಿತಿ ಸಂಗ್ರಹಿಸಿ ಕ್ರೋಡೀಕೃತ ಮಾಹಿತಿಯನ್ನು ಆಯಾ ಉಪನಿರ್ದೇಶಕರ ಮೂಲಕ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ ಇವರ ಮುಖಾಂತರ ಈ ಕಛೇರಿಗೆ ಕಳುಹಿಸುವುದು.

ಉಲ್ಲೇಖ-6ರ ಸರ್ಕಾರದ ಪತ್ರದಲ್ಲಿ ಈ ವಿಷಯದ ಬಗ್ಗೆ ಪ್ರಸ್ತಾಪಿಸಿ ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಕಾಯಿದೆ,2003 ರಂತೆ ***"ಶಾಲಾ/ಕಾಲೇಜುಗಳ ಆವರಣದಿಂದ 100 ಗಜಗಳ ಅಂತರದಲ್ಲಿ***

***ತಂಬಾಕುಯುಕ್ತ ವಸ್ತುಗಳ ಮಾರಾಟ ನಿಷೇದದ ಬಗ್ಗೆ ಶಾಲೆಗಳಲ್ಲಿ ಈ ಕ್ರಮ ಅನುಷ್ಠಾನಗೊಂಡಿರುವ ಕುರಿತು ಕೆಳಕಂಡ ಅನುಬಂಧದಲ್ಲಿ ಮಾಹಿತಿ ಒದಗಿಸುವಂತೆ ತಿಳಿಸಿದೆ.***

| ಕ್ರ.ಸಂ | ವಿಷಯ | ಕ್ರಮ ಮಾಡಿರುವ ಶಾಲೆಗಳ ಸಂಖ್ಯೆ | ಕ್ರಮ ವಹಿಸದಿರುವ ಶಾಲೆಗಳ ಹೆಸರು ಮತ್ತು ವಿಳಾಸ |
|---|---|---|---|
| 1 | ನಿಮ್ಮ ವ್ಯಾಪ್ತಿಯಲ್ಲಿನ ಎಲ್ಲಾ ಶಾಲಾ/ಕಾಲೇಜುಗಳ ಆವರಣದಿಂದ 100 ಗಜಗಳ ಅಂತರದಲ್ಲಿ ತಂಬಾಕುಯುಕ್ತ ವಸ್ತುಗಳ ಮಾರಾಟ ನಿಷೇಧಿಸಿದೆ ಎಂದು ಶಾಲಾ/ಕಾಲೇಜುಗಳ ಆವರಣಗಳಲ್ಲಿ ಫಲಕಗಳನ್ನು ಪ್ರದರ್ಶಿಸಲಾಗಿದೆಯೇ ಆ ಬಗ್ಗೆ ಮಾಹಿತಿ | | |
| 2 | ಪ್ರತಿಯೊಂದು ಶಾಲೆಯ ಮುಖ್ಯ ಶಿಕ್ಷಕರು ಈ ಬಗ್ಗೆ ನೋಡಲ್ ಅಧಿಕಾರಿಯಾಗಿ ನೇಮಿಸಿ ಈ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಿ ಅಗತ್ಯ ಕ್ರಮ ವಹಿಸಿರುವ ಬಗ್ಗೆ ಮಾಹಿತಿ | | |
| 3 | ವರದಿ ಮಾಡುತ್ತಿರುವ ಸಂದರ್ಭದಲ್ಲಿ ಎಷ್ಟು ಶಾಲೆಗಳಲ್ಲಿ ಧೂಮಪಾನ ನಿಷೇದ ಕಾಯ್ದೆಯಂತೆ ಕ್ರಮಾನುಸರಣೆ 'ಆಗಿದೆ ಮತ್ತು ಆಗಿಲ್ಲದಿರುವ ಶಾಲೆಗಳ ವಿವರ | | |

(ತುಷಾರ್ ಗಿರಿ ನಾಥ್)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

***ಗೆ,***

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.

***ಪ್ರತಿಯನ್ನು:***

1. ಗೌರವಪೂರ್ವಕವಾಗಿ ಸರ್ಕಾರದ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01 ಇವರ ಮಾಹಿತಿಗಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ/ಧಾರವಾಡ, ಇವರ ಮಾಹಿತಿಗಾಗಿ ಕಳುಹಿಸಿದೆ.
3. ರಾಜ್ಯದ ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
4. ಹಿರಿಯ ಸಹಾಯಕ ನಿರ್ದೇಶಕರು, ಅನುದಾನಿತ ಪ್ರಾಥಮಿಕ /ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು.
5. ಡಾ.ವಿಶಾಲ್ ರಾವ್, ಯು.ಎಸ್. ಮುಖ್ಯಸ್ಥರು ಮತ್ತು ಸರ್ಜನ್, ಪೋರ್ಟಿಸ್ ಹಾಸ್ಪಿಟಲ್, Consultant for Institute of Public Health, No 250. Masters cottage, 2, c cross c, Main, Girinagar 1st Phase, Bangalore-56085
6. ಕಛೇರಿ ಪ್ರತಿ. DNR\\3-server\typing3\E\EST4\2988-11.doc